

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# 'ಬಾಗಿದ ತಲೆ ಮುಗಿದ ಕೈ'

ಕಡೂರಿನಲ್ಲಿ ಏರ್ಪಾಡಾಗಿದ್ದ ನಮ್ಮ ಮಠದ ವಾರ್ಷಿಕ ಸಮಾರಂಭವಾದ ತರಳಬಾಳು ಹುಣ್ಣಿಮೆ ಮಹೋತ್ಸವ ಮೊನ್ನೆ ತಾನೆ ಮುಕ್ತಾಯಗೊಂಡಿತು. ಆರಂಭದ ದಿನ ನಮ್ಮನ್ನು ಕ್ಷಣಕಾಲ ಬೆಚ್ಚಿಬೀಳಿಸಿದ ಹಾಗೂ ಎಚ್ಚರಿಸಿದ ಒಂದು ಅನಿರೀಕ್ಷಿತ ಘಟನೆ. ಸಿರಿಗೆರೆಯಿಂದ ಹೊಸದುರ್ಗ ಮಾರ್ಗವಾಗಿ ಕಡೂರಿಗೆ ಪ್ರಯಾಣ ಮಾಡುವಾಗ ಹಿಂದೆ ಮುಂದೆ ಶಿಷ್ಯರ ನೂರಾರು ವಾಹನಗಳು. ದಾವಣಗೆರೆಯ 'ಶಿವಸೈನ್ಯ' ಯುವಕರಿಂದ ಕೈಯಲ್ಲಿ ಶಿವಧ್ವಜವನ್ನು ಹಿಡಿದು ಜಯಘೋಷಗಳನ್ನು ಕೂಗುತ್ತಾ ನೂರಾರು ಮೋಟಾರುಬೈಕುಗಳ ರ್‍ಯಾಲಿ. ದಾರಿಯುದ್ದಕ್ಕೂ ಭಕ್ತಾದಿಗಳು ಅವರವರ ಗ್ರಾಮದ ಸರಹದ್ದಿನಲ್ಲಿ ತಳಿರು ತೋರಣ ಕಟ್ಟಿ ತಮಟೆ ಮದ್ದಳೆ ಬಾರಿಸುತ್ತಾ ಹಣ್ಣುಹಾರಾರ್ಪಣೆ, ಕಾಣಿಕೆ ಸಮರ್ಪಣೆ ಮಾಡಲು ಕಾದು ನಿಂತಿದ್ದರು. ಹತ್ತಿರ ಬರುತ್ತಿದ್ದಂತೆಯೇ ತಾಯಂದಿರು ತಮ್ಮ ಕಂಕುಳದಲ್ಲಿದ್ದ ಮುದ್ದು ಮಕ್ಕಳು ಕೈಜೋಡಿಸಿ ನಮಸ್ಕರಿಸುವಂತೆ ಮಾಡಿದರು. ಎಲ್ಲರ ಮುಖದಲ್ಲಿ ಮಂದಹಾಸ, ಕಣ್ಣುಗಳಲ್ಲಿ ಸಂತಸದ ನೋಟ. ಹೊಸದುರ್ಗ ದಾಟುವಾಗ ಶಿಷ್ಯರ ನೂಕುನುಗ್ಗಲು. ಗುಂಪಿನ ಮಧ್ಯದಿಂದ ಒಬ್ಬ ಮಧ್ಯವಯಸ್ಕ ಏರಿದ ದನಿಯಲ್ಲಿ ಕೂಗಿ ಹೇಳಿದ: 'ಈ ಗುರುವಾರ ಅಂಕಣ ಬರೆಯುವುದನ್ನು ಬಿಟ್ಟರೆ ಸತ್ತೇ ಹೋಗ್ತೀನಿ!'

ನಮ್ಮ ಈ ಅಂಕಣ ಇದೀಗ 200 ವಾರಗಳನ್ನು ದಾಟಿದೆ. ಇಷ್ಟು ದೀರ್ಘಕಾಲ ನಾವು ಪ್ರತಿವಾರವೂ ತಪ್ಪದೆ ಬರೆಯುತ್ತಾ ಬಂದಿರುವುದು ನಮಗೇ ಅಚ್ಚರಿಯನ್ನುಂಟುಮಾಡಿದೆ. ನಾಲ್ಕು ವರ್ಷಗಳ ಸುದೀರ್ಘ ಅವಧಿಯಲ್ಲಿ ಒಂದೆರಡು ದಿನಗಳು ಮಾತ್ರ ಬರೆಯುವ ಪ್ರಮೇಯ ಒದಗಿ ಬರಲಿಲ್ಲ. ನಮ್ಮ ಅಂಕಣ ಪ್ರಕಟವಾಗುವ ದಿನದಂದೇ ಪತ್ರಿಕೆಗೆ ರಜೆ ಇದ್ದ ಕಾರಣ ನಮಗೆ ಅನಾಯಾಸವಾಗಿ ದೊರೆತ ಆ ಬಿಡುವಿನ ಅನುಭವದ ತೀವ್ರತೆಯನ್ನು ಶಬ್ದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ನಾವು ಕಟ್ಟಿಕೊಂಡ ಅಥವಾ ನಮಗೆ ಸುತ್ತಿಕೊಂಡ ಮಠ ಮತ್ತು ಸಂಘ ಸಂಸ್ಥೆಗಳ ಆರ್ಥಿಕ ಮತ್ತು ಆಡಳಿತಾತ್ಮಕ ಜವಾಬ್ದಾರಿಗಳ ನಿರ್ವಹಣೆ ಒಂದೆಡೆ. ಅನಿವಾರ್ಯವಾಗಿ ಭಾಗವಹಿಸಲೇಬೇಕಾಗಿರುವ ಸಭೆ ಸಮಾರಂಭಗಳ ಒತ್ತಡ ಮತ್ತೊಂದೆಡೆ. ಅವುಗಳನ್ನು ಕುರಿತು ಬರೆದರೆ (ಅದಕ್ಕಾದರೂ ಸಮಯವೆಲ್ಲಿ!) ಅದೊಂದು ಹೆಬ್ಬೊತ್ತಗೆಯೇ ಆದೀತು. ಬಸವಣ್ಣನವರ ಮಾತಿನಲ್ಲಿ ಹೇಳುವುದಾದರೆ 'ಕೂಸುಳ್ಳ ಸೂಳೆ ಒತ್ತೆಯ ಕೊಂಡರೆ ಕೂಸಿಂಗಲ್ಲ, ಬೊಜಗಂಗಲ್ಲ, ಕೂಸನೊಮ್ಮೆ ಸಂತೈಸುವಳು, ಬೊಜಗನನೊಮ್ಮೆ ನೆರೆವಳು' ಎಂಬ ಇಬ್ಬಂದಿ ಸ್ಥಿತಿ ನಮ್ಮದು! ಹಾಗೆಂದು ಈ ಜವಾಬ್ದಾರಿಗಳಿಂದ ಕಳಚಿಕೊಳ್ಳುವಂತೆಯೂ ಇಲ್ಲ. ಸಮಾಜವನ್ನು ತಿದ್ದುವುದು ಲೇಖನವನ್ನು ತಿದ್ದಿದಷ್ಟು ಸುಲಭದ ಕಾರ್ಯವಲ್ಲ. ಸಮಾಜದ ಬೃಹತ್ ಜವಾಬ್ದಾರಿಗಳನ್ನು ಅಲಕ್ಷಿಸದೆ ಅವುಗಳನ್ನು ನಿರ್ವಹಿಸುತ್ತಲೇ ಸಾಹಿತ್ಯ ಶಿಶುವಿಗೆ ಹಾಲುಣಿಸುವುದು, ಬೆಳೆಸುವುದು ಕಷ್ಟಕರವಾದ ಸಂಗತಿ. ಆದರೂ ಸಹೃದಯ ಓದುಗರಿಗೆ ನಿರಾಶೆಯಾಗದಿರಲೆಂದು ಈ ಸಂದರ್ಭದಲ್ಲಿ ನಮ್ಮ ನೆನಪಿಗೆ ಬಂದ ಹಿರಿಯ ಜೀವವೊಂದರ ವ್ಯಕ್ತಿಚಿತ್ರಣವನ್ನು ಇಲ್ಲಿ ದಾಖಲಿಸಲಾಗಿದೆ:

ಕಚ್ಚೆ ಪಂಚೆ, ಕರೀಕೋಟು, ತಲೆಯ ಮೇಲೆ ಗಾಂಧಿ ಟೊಪ್ಪಿಗೆ. ಪರಿಶುಭ್ರವಾದ ಬಿಳಿಯ ವಸ್ತ್ರ, ಮುಖದಮೇಲೆ ಸದಾ ಮಿನುಗುವ ಮಂದಹಾಸ, ತೆಳನೆಯ ನೀಳ ಕಾಯ, ಯಾರೇ ಮನೆಗೆ ಬರಲಿ 'ಬಾಗಿದ ತಲೆ, ಮುಗಿದ ಕೈ' ಆಗಿ ಸ್ವಾಗತಿಸುತ್ತಿದ್ದ ಧಾರವಾಡದ ಹಿರಿಯ ವ್ಯಕ್ತಿ ಐ.ಜಿ. ಹಿರೇಗೌಡರು. ಅವರ ಸೌಜನ್ಯ ಯಾವ ಮಟ್ಟದ್ದೆಂದರೆ, ಚಿಕ್ಕ ಮಕ್ಕಳನ್ನೂ ಸಹ ಅವರು ಬಹುವಚನದಲ್ಲಿಯೇ ಮಾತಾಡಿಸುತ್ತಿದ್ದರು. "ಏನಿ ಬಂದಿರಿ ಹದುಳವಿದ್ದಿರೆ ಎಂದರೆ ನಿಮ್ಮ ಮೈಸಿರಿ ಹಾರಿ ಹೋಹುದೆ?" "ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ" ಎನ್ನುವ ಬಸವಣ್ಣನವರ ವಚನಗಳನ್ನು ತಮ್ಮ ನಡೆ ನುಡಿಗಳಲ್ಲಿ ಅವರು ಸಾಕಾರಗೊಳಿಸಿಕೊಂಡಿದ್ದರು.



ಅವರು ಕೈಗೊಂಡ ವೃತ್ತಿ ವಕೀಲಿಕಿ. ಹೊಸಮನಿ ಸಿದ್ದಪ್ಪನವರೊಂದಿಗೆ ಹೋಲಿಸಬಹುದಾದ ಮೇಧಾವಿ ವ್ಯಕ್ತಿತ್ವ. ಅವರದು ಸರಳ ಉಡುಗೆ, ಹಮ್ಮು-ಬಿಮ್ಮುಗಳಿಲ್ಲದ ಸೌಜನ್ಯ ಶೀಲ ನಡವಳಿಕೆ. ವಕೀಲಿ ವೃತ್ತಿಯಲ್ಲಿ ದೊಡ್ಡ ಸಾಧನೆ ಮಾಡಿದ ಹಿರೇಗೌಡರು ವಾದಿಸಲು ನಿಂತರೆ ಬೇರೆ ವಕೀಲರುಗಳು ತಮ್ಮ ಕೇಸುಗಳನ್ನು ಮುಂದಕ್ಕೆ ಹಾಕಿಸಿಕೊಂಡು ಕೋರ್ಟಿನಲ್ಲಿ ಅವರ ವಾದವನ್ನು ಕೇಳಲು ಮೈಯೆಲ್ಲಾ ಕಿವಿಯಾಗಿ ಕುಳಿತಿರುತ್ತಿದ್ದರು. ಅವರಿಗೆ ಇಂಗ್ಲಿಷ್ ಭಾಷೆಯಲ್ಲಿ ಉತ್ತಮ ಪ್ರಭುತ್ವವಿತ್ತು. ಅವರು ಒಮ್ಮೆ ನ್ಯಾಯಾಧೀಶರಾಗಿ ನಿಯುಕ್ತರಾದರೂ ಅಲ್ಲಿ ಬಹಳ ದಿನಗಳ ಕಾಲ ಕೆಲಸ ಮಾಡದೆ ಪದತ್ಯಾಗ ಮಾಡಿ ವಕೀಲಿ ವೃತ್ತಿಯನ್ನೇ ಮುಂದುವರಿಸಿದರು. ಒಂದು ವೇಳೆ ಅವರು ಅದೇ ವೃತ್ತಿಯಲ್ಲಿ ಮುಂದುವರಿದಿದ್ದರೆ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ನ್ಯಾಯಾಧೀಶರಾಗುತ್ತಿದ್ದರು ಎಂದು ಅನೇಕ ಹಿರಿಯ ನ್ಯಾಯಾಧೀಶರೇ ಅವರ ವ್ಯಕ್ತಿತ್ವವನ್ನು ಸ್ಮರಿಸಿಕೊಳ್ಳುತ್ತಾರೆ. ನಮ್ಮ ನಾಡಿನ ಅನೇಕ ನ್ಯಾಯಾಧೀಶರುಗಳು ಅವರ ಜೂನಿಯರ್‌ಗಳಾಗಿ ಕೆಲಸ ಮಾಡಿದವರಾಗಿದ್ದಾರೆ.

ನಮ್ಮ ಗುರುವರ್ಯರ ಕಾಲದಲ್ಲಿ ಪ್ರತಿಯೊಂದು ತರಳಬಾಳು ಹುಣ್ಣಿಮೆಯ ಕೊನೆಯ ದಿನವೂ ಐ.ಜಿ. ಹಿರೇಗೌಡರ ಭಾಷಣ ಇದ್ದೇ ಇರುತ್ತಿತ್ತು. ಅವರು ತಮ್ಮ ಭಾಷಣಕ್ಕೆ ಆಯ್ಕೆ ಮಾಡಿಕೊಳ್ಳುತ್ತಿದ್ದ ವಿಷಯವೂ ಒಂದೇ ಆಗಿರುತ್ತಿತ್ತು: "ಬಸವಣ್ಣ ಮತ್ತು ಏಸುಕ್ರಿಸ್ತ". ಇಬ್ಬರೂ ಅವರ ಮೇಲೆ ಅಪಾರ ಪ್ರಭಾವ ಬೀರಿದ್ದರು. ಏಸುಕ್ರಿಸ್ತನ ಪ್ರಭಾವ ಅವರ ಮೇಲೆ ಎಷ್ಟಿತ್ತೆಂದರೆ, ನಮ್ಮ ಗುರುಗಳವರ ಸಂಪರ್ಕ ಅವರಿಗೆ ದೊರೆಯದೇ ಹೋಗಿದ್ದರೆ ಅವರು ಉತ್ತಂಗಿ ಚೆನ್ನಪ್ಪನವರಂತೆ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದರು ಎಂದು ಆ ಕಾಲದ ಜನರು ಮಾತನಾಡುತ್ತಿದ್ದರು. ಗುರುಗಳವರ ಸಂಪರ್ಕಕ್ಕೆ ಬಂದ ನಂತರ ಬಸವಣ್ಣನ ವಿಚಾರ ಧಾರೆ ಅವರನ್ನು ಸೆಳೆಯಿತು. ಬಸವಣ್ಣ ಮತ್ತು ಏಸುಕ್ರಿಸ್ತರ ವಿಚಾರಗಳನ್ನು ತುಲನೆ ಮಾಡಿ, ಸಮಾನ ಅಂಶಗಳನ್ನು ಎತ್ತಿಹಿಡಿದು ತಮ್ಮ ಭಾಷಣದಲ್ಲಿ ಅವರು ಪ್ರತಿಪಾದಿಸುತ್ತಿದ್ದ ರೀತಿ ಅನನ್ಯವಾಗಿತ್ತು.

ನಮ್ಮ ಗುರುಗಳವರ ಬಗೆಗೆ ಅವರಿಗೆ ಅಪಾರ ಅಭಿಮಾನವಿತ್ತು. ಅವರ ಅಪ್ರತಿಮ ಗುರುಭಕ್ತಿಯ ದ್ಯೋತಕವಾದ ಒಂದು ಘಟನೆ ಹೀಗಿದೆ: ಒಮ್ಮೆ ಧಾರವಾಡದಲ್ಲಿ ನಡೆದ ಒಂದು ಸಭೆಯಲ್ಲಿ ಮುಖಂಡರನೇಕರು ಭಾಗವಹಿಸಿದ್ದರು. ಅವರಲ್ಲಿ ಬಹುತೇಕರು ನಮ್ಮ ಗುರುಗಳವರ ವಿರೋಧಿಗಳಾಗಿದ್ದರು. ಅವರ ಬಗ್ಗೆ ಇಲ್ಲ ಸಲ್ಲದ ರೀತಿಯಲ್ಲಿ ಮಾತನಾಡುವುದು, ಅಪಪ್ರಚಾರ ಮಾಡುವುದು ವ್ಯವಸ್ಥಿತವಾಗಿ ನಡೆದೇ ಇತ್ತು. ಆ ಸಭೆಯೂ ಸಹ ಅದಕ್ಕೆ ಅಪವಾದವಾಗಿರಲಿಲ್ಲ. ಸಭೆಯಲ್ಲಿ ನಮ್ಮ ಗುರುಗಳ ಬಗ್ಗೆ ಪ್ರಸ್ತಾಪ ಮಾಡಿದ ಒಬ್ಬ ಮುಖಂಡರು ಮನಸ್ಸೀ ನಿಂದಿಸತೊಡಗಿದರು. ಅವರನ್ನು ಅನುಸರಿಸಿ ಮುಂದೆ ಮಾತನಾಡಿದವರೆಲ್ಲರೂ ಅದೇ ವರಸೆಯನ್ನು ಮುಂದುವರಿಸಿ ಗುರುಗಳ ಬಗ್ಗೆ ಅತ್ಯಂತ ಕೀಳು ರೀತಿಯ ನಿಂದನೆಯನ್ನು ಮಾಡಿ ತಮ್ಮ ನಾಲಗೆಯ ನಂಜನ್ನು ಹರಿಸಿದರು. ಕೊನೆಗೆ ಐ.ಜಿ. ಹಿರೇಗೌಡರು ಎದ್ದು ನಿಂತರು. ಅವರ ಮುಖ ಕೆಂಪಾಗಿತ್ತು. ಗಂಭೀರ ಕಂಠದಲ್ಲಿ ಅವರು ತಮ್ಮ ಮಾತನ್ನು ಪ್ರಾರಂಭಿಸಿದರು. "ಸನ್ಮಾನ್ಯರೇ, ನೀವು ಇಷ್ಟು ಹೊತ್ತು ಯಾರನ್ನು ಮನಸೋ ಇಚ್ಛೆ ಬೈದಿರೋ ಆ ಗುರುಗಳವರ ಪರಮಾಪ್ತ ಶಿಷ್ಯ ನಾನು!" ಈ ಮಾತನ್ನು ಗೌಡರು ಆಡಿದ ತಕ್ಷಣ ಇಡೀ ಸಭೆ ಗರಬಡಿದಂತಾಯ್ತು; ಜಂಘಾಬಲ ಉಡುಗಿ ಹೋಗಿತ್ತು. ಐ.ಜಿ. ಹಿರೇಗೌಡರು ನಮ್ಮ ಲಿಂಗೈಕ್ಯ ಗುರುಗಳವರ ಶಿಷ್ಯರೆಂದು ಯಾರಿಗೂ ತಿಳಿದಿರಲಿಲ್ಲ. ತಮ್ಮ ನಾಲಗೆಯ ನವೆಯನ್ನು ಪರಿಹರಿಸಿಕೊಳ್ಳಲು ಮಾತನಾಡಿದ ಆ ಮುಖಂಡರುಗಳಿಗೆ ಚೆನ್ನಾಗಿ ಛೀಮಾರಿ ಹಾಕಿ ಗುರುಗಳವರ ಉದಾತ್ತ ಧ್ಯೇಯಗಳನ್ನು ಅರ್ಥಮಾಡಿಕೊಳ್ಳುವಂತೆ ಗೌಡರು ತಿಳಿ ಹೇಳಿದರು.

ವಕೀಲರುಗಳಲ್ಲಿ ತಮ್ಮ ಕಕ್ಷಿದಾರರು ಸುಳ್ಳರಿರಲಿ, ಕಳ್ಳರಿರಲಿ ಅವರ ಹಿತವನ್ನು ರಕ್ಷಿಸುವುದು ತಮ್ಮ ಪರಮ ಕರ್ತವ್ಯವೆಂದು ಭಾವಿಸುವವರೇ ಹೆಚ್ಚು. ಆದರೆ ಹಿರೇಗೌಡರು ನ್ಯಾಯವನ್ನು ಎತ್ತಿ ಹಿಡಿಯುವುದು ಮಾತ್ರ ನ್ಯಾಯವಾದಿಯ ಕರ್ತವ್ಯ ಎಂದು ಭಾವಿಸಿದವರಾಗಿದ್ದರು. ಅವರು ತಮಗೆ ಬಂದ ಎಲ್ಲ ಕೇಸುಗಳನ್ನು ಹಿಡಿಯುತ್ತಿರಲಿಲ್ಲ. ತಮ್ಮ ಬಳಿಗೆ ಬಂದವನಿಗೆ ಅನ್ಯಾಯವಾಗಿದೆ ಎಂದು ಮನವರಿಕೆ ಆದರೆ ಮಾತ್ರ ಅವನನ್ನು ಕಕ್ಷಿದಾರನನ್ನಾಗಿ ಸ್ವೀಕರಿಸಿ ಅವನ ಕೇಸನ್ನು ತೆಗೆದುಕೊಳ್ಳುತ್ತಿದ್ದರು. ತಮ್ಮ ಲಾಭಕ್ಕಾಗಿ ಕೇಸುಗಳನ್ನು ವೃಥಾ ಎಳೆದಾಡಿಸಬಾರದು, ಸಾಧ್ಯವಾದಷ್ಟೂ ಎರಡೂ ಪಕ್ಷದವರನ್ನು ರಾಜಿ ಮಾಡಿಸಿ ವ್ಯಾಜ್ಯ ಬಗೆಹರಿಸಬೇಕೆಂದು ಅವರು ಬಯಸುತ್ತಿದ್ದರು, ಹಾಗೆಯೇ ಸ್ವತಃ ರಾಜಿ ಮಾಡಿಸುತ್ತಿದ್ದರು. ಅವರ ಮನೆತನದ ಹೆಸರು ಹಿರೇಗೌಡರು. ಒಂದರ್ಥದಲ್ಲಿ ನ್ಯಾಯವಾದಿಗಳ ಸಮುದಾಯಕ್ಕೇನೆ "ಹಿರೇಗೌಡ"ರಾಗಿ ಮಾರ್ಗದರ್ಶನ ಮಾಡಿದ ಅಪರೂಪದ ವ್ಯಕ್ತಿ ಅವರಾಗಿದ್ದರು.

9.2.2012

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑